## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1037 |
| ಸದಸ್ಯರ ಹೆಸರು : | ಶ್ರೀ ಎನ್.ರವಿಕುಮಾರ್, (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 19.12.2018. |
| ಉತ್ತರಿಸುವ ಸಚಿವರು : | ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಪ್ರಧಾನ ಖನಿಜಗಳ ಅನಧಿಕೃತ ಸಾಗಾಣಿಕೆಗಾಗಿ ಸಮರ್ಪಕವಾಗಿ ದಂಡವನ್ನ ವಿಧಿಸದೇ ಇರುವುದರಿಂದ 2015–16 ನೇ ಆರ್ಥಿಕ ವರ್ಷಗಳಲ್ಲಿ ರಾಜಸ್ವಕ್ಕೆ ರೂ.58.22 ಕೋಟಿ ರೂ.ಗಳ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿಯ ನಷ್ಟಕ್ಕೆ ಯಾವ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಈ ನಷ್ಟವನ್ನು ವಸೂಲು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ.; | ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರಧಿ, ರಾಜಸ್ವ ವಲಯ ಮಾರ್ಚ 2017 ಕ್ಕೆ ಅಂತ್ಯಗೊಂಡ ಲೆಕ್ಕ ಪರಿಶೋಧನಾ ವರದಿಯ ಪ್ಯಾರಾ 5.6 ರನ್ವಯ 2012–13 ರಿಂದ 2015–16 ನೇ ಸಾಲಿನ ವರೆಗೆ 58.22 ಕೋಟಿ ಲೆಕ್ಕ ಪರಿಶೋಧನಾ ಆಕ್ಷೇಪಣಾ ವರದಿಯ ಬಗ್ಗೆ ಪ್ರಸ್ತಾಪಿಸಲಾಗಿದೆ.<br>ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ–1994ರ ನಿಯಮ–42ರಂತೆ ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಉತ್ಪಾದಿಸಿದ ಉಪಖನಿಜವನ್ನು ಖನಿಜ ಸಾಗಾಣಿಕೆ ಪರವಾನಿಗೆ ಪಡೆದು ರವಾನಿಸಬೇಕಾಗಿರುತ್ತದೆ. ಆದರೆ, ಕಟ್ಟಡ ಕಲ್ಲುಗಣಿ ಗುತ್ತಿಗೆದಾರರು ಪರವಾನಿಗೆ ಪಡೆಯದೆ ಖನಿಜ ಸಾಗಾಣಿಕೆ ಮಾಡುತ್ತಿರುತ್ತಾರೆ. ನಿಯಮ–40ರನ್ವಯ ಇಲಾಖಾ ತಾಂತ್ರಿಕ ಅಧಿಕಾರಿಗಳು ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ವಾರ್ಷಿಕ ಲೆಕ್ಕತಪಾಸಣೆ ಕಾರ್ಯ ಕೈಗೊಂಡು ಗುತ್ತಿಗೆ ಪ್ರದೇಶದಲ್ಲಿ ತೆಗೆದಿರುವ ಉಪಖನಿಜವನ್ನು ಅಂದಾಜಿಸಿ ಸದರಿ ಉಪಖನಿಜ ಪ್ರಮಾಣಕ್ಕನುಗುಣವಾಗಿ ರಾಜಧನ ಪಾವತಿಸಿಕೊಳ್ಳುವ ಪದ್ಧತಿ ಇರುತ್ತದೆ. ಕಟ್ಟಡ ಕಲ್ಲು ಸರ್ಕಾರದ ಕಾಮಗಾರಿ ಮತ್ತು ಸಾರ್ವಜನಿಕರ ನಿರ್ಮಾಣ ಕಾಮಗಾರಿಗಳಿಗೆ ಬಳಕೆಯಾಗುವ ಖನಿಜವಾಗಿದ್ದು, ಸರ್ಕಾರಿ ಕಾಮಗಾರಿಗಳಲ್ಲಿ ಬಳಕೆಯಾದ ಖನಿಜಕ್ಕೆ ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಟಾವಣೆ ಮಾಡಲಾಗುತ್ತದೆ. ಖನಿಜ ರವಾನೆ ಪರವಾನಿಗೆ ಪಡೆಯದೆ ಕಟ್ಟಡ ಕಲ್ಲು ಸಾಗಾಣಿಕೆಯಾಗಿದ್ದರೂ ಸಹ ಸದರಿ ಉಪಖನಿಜಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಥವಾ |
| ಆ) | ಖನಿಜ ರವಾನೆ ಪರವಾನಿಗೆಯನ್ನು ಹೊಂದಿರದೆಯೇ ಸಾಗಾಣಿಕೆ ಮಾಡಲಾದ ದಂಡದ ರೂಪದಲ್ಲಿ ವಿಧಿಸಬೇಕೆಂದು ನಿಯಮವಿದ್ದರೂ ಈ ನಿಯಮಗಳನ್ನು ಪಾಲನೆ ಮಾಡಲು ಅಧಿಕಾರಿಗಳಿಗೆ ಇರುವ ಸಮಸ್ಯೆಯೇನು; ಅಧಿಕಾರಿಗಳ ತೀವ್ರ ಕರ್ತವ್ಯ ಲೋಪದಿಂದ ಮತ್ತು ಅಕ್ರಮ ಖನಿಜ ಸಾಗಣೆದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸರ್ಕಾರಕ್ಕೆ ರೂ.58.22 ಕೋಟಿಗಳ ನಷ್ಟ ಉಂಟು, ಮಾಡಿದ ಬಗ್ಗೆ ಸಿಎಜಿ ವರಧಿಯಲ್ಲಿ ತಿಳಿಸಲಾಗಿದ್ದು, ಈ ಕುರಿತು ನಷ್ಟ ಉಂಟು ಮಾಡಿದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡದಿರಲು ಕಾರಣವೇನು; ಈ ಕುರಿತು ಕ್ರಮ ಕೈಗೊಳ್ಳಲಾಗುವುದೇ? | |

| | | |
|---|---|---|
| | | ಕಾಮಗಾರಿ ನಿರ್ವಹಿಸುವ ಇಲಾಖೆ/ಸಂಸ್ಥೆಗಳಲ್ಲಿ ರಾಜಧನ ಸಂದಾಯವಾಗುತ್ತಿರುತ್ತದೆ.<br>ಆದರೆ ಸದರಿ ಕಲ್ಲುಗಣಿ ಗುತ್ತಿಗೆದಾರರು ಸಾಗಾಣಿಕೆ ಪರವಾನಿಗೆ ಇಲ್ಲದೆ ಖನಿಜ ಸಾಗಾಣಿಕೆ ಮಾಡಿರುವುದಕ್ಕೆ ದಂಡ ವಿಧಿಸದಿರುವ ಬಗ್ಗೆ ಸಂಬಂಧಿಸಿದ ಆಕ್ಷೇಪಣೆಗಳಾಗಿರುತ್ತವೆ. ಸದರಿ ಸಿ.ಎ.ಜಿಯವರ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಅನುಸರಣಾ ವರದಿಯನ್ನು ಸಲ್ಲಿಸಲಾಗಿದೆ.<br>ಅನುಸರಣಾ ವರದಿಯಲ್ಲಿ ಐದು ಪಟ್ಟು ದಂಡ ವಿಧಿಸುವ ಬಗ್ಗೆ ಕಾನೂನಿನಲ್ಲಿರುವ ತೊಡಕುಗಳ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿರುತ್ತದೆ. ಮುಂದುವರೆದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಕಲ್ಲು ಗಣಿ ಗುತ್ತಿಗೆದಾರರಿಗೆ ದಂಡ ಪಾವತಿಸುವಂತೆ ಸೂಚಿಸಿ ಸೂಚನಾ ಪತ್ರಗಳನ್ನು ಜಾರಿ ಮಾಡಲಾಗಿದೆ.<br>ಸದರಿ ಸಿ.ಎ.ಜಿ ರವರ ಆಕ್ಷೇಪಣೆಗಳು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಪರಿಶೀಲನೆಯಲ್ಲಿದ್ದು, ಸಮಿತಿಯ ಶಿಫಾರಸ್ಸಿನಂತೆ ಕ್ರಮಕೈಗೊಳ್ಳಲಾಗುವುದು. |

ಸಂಖ್ಯೆ: ಸಿಐ 482 ಎಂಎಂಎನ್ 2018

**(ರಾಜಶೇಖರ ಬಿ. ಪಾಟೀಲ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು.